# ಕರ್ನಾಟಕ ಸರ್ಕಾರದ ನಡವಳಿಗಳು

24 NOV 2016

ವಿಷಯ:- ಹೊಸ ಮೀನುಗಾರಿಕಾ ದೋಣಿಗಳ ನಿರ್ಮಾಣಕ್ಕೆ ಸಾಧ್ಯತಾ ಪತ್ರ ನೀಡುವ ಬಗ್ಗೆ.

ಓದಲಾಗಿದೆ:- 1) ಆದೇಶ ಸಂಖ್ಯೆ: ಎಹೆಚ್‌ಎಫ್/481/ಎಸ್‌ಎಫ್‌ಎಮ್/94 ದಿನಾಂಕ: 15-12-1994.

2) ಆದೇಶ ಸಂಖ್ಯೆ: ಪಸಂಮೀ/114/ಮೀಇಯೋ/2009 ದಿನಾಂಕ: 23-06-2009.

3) ಆದೇಶ ಸಂಖ್ಯೆ: ಪಸಂಮೀ/208/ಮೀಇಯೋ/2009, ದಿನಾಂಕ: 04-11-2009.

4) ಪತ್ರ ಸಂಖ್ಯೆ: ಪಸಂಮೀ/146/ಮೀಇಯೋ/2012, ದಿನಾಂಕ: 27-07-2012.

5) ಆದೇಶ ಸಂಖ್ಯೆ: ಪಸಂಮೀ/142/ಮೀಇಯೋ/2013, ದಿನಾಂಕ: 10-09-2014.

6) ಆದೇಶ ಸಂಖ್ಯೆ: ಪಸಂಮೀ/145/ಮೀಇಯೋ/2015, ದಿನಾಂಕ: 02-05-2016.

7) ಪತ್ರ ಸಂಖ್ಯೆ: ಡಿಎಫ್/78/ಎಂಇಎಫ್/2016, ದಿನಾಂಕ: 26-10-2016.

******

## ಪ್ರಸ್ತಾವನೆ:

ಮೇಲೆ ಕ್ರಮ ಸಂಖ್ಯೆ (1), (2) ಮತ್ತು (3)ರಲ್ಲಿ ಓದಲಾದ ಆದೇಶಗಳಲ್ಲಿ, 48 ಅಡಿಗಿಂತ ಹೆಚ್ಚಿನ ಉದ್ದದ ಯಾಂತ್ರಿಕ ದೋಣಿಗಳ ನಿರ್ಮಾಣಕ್ಕೆ ಸಾಧ್ಯತಾ ಪತ್ರವನ್ನು ನೀಡುವ ಗುರಿಯನ್ನು ಪ್ರತಿವರ್ಷಕ್ಕೆ ದಕ್ಷಿಣ ಕನ್ನಡ ಜಿಲ್ಲೆಗೆ-100, ಉಡುಪಿ ಜಿಲ್ಲೆಗೆ-100 ಹಾಗೂ ಉತ್ತರ ಕನ್ನಡ ಜಿಲ್ಲೆಗೆ-25 ರಂತೆ ನಿಗದಿಪಡಿಸಿದೆ.

ಮೇಲೆ ಕ್ರಮ ಸಂಖ್ಯೆ (4)ರಲ್ಲಿ ಓದಲಾದ ಸರ್ಕಾರದ ಪತ್ರದಲ್ಲಿ, ದಕ್ಷಿಣ ಕನ್ನಡ ಜಿಲ್ಲೆ 55, ಉಡುಪಿ ಜಿಲ್ಲೆಯ 185 ಹಾಗೂ ಉತ್ತರ ಕನ್ನಡ ಜಿಲ್ಲೆಯ 25 ಅರ್ಜಿದಾರರಿಗೆ ಸಾಧ್ಯತಾ ಪತ್ರ ನೀಡಲು ಅನುಮತಿ ನೀಡಲಾಗಿದೆ.

ಮೇಲೆ ಕ್ರಮ ಸಂಖ್ಯೆ (5)ರಲ್ಲಿ ಓದಲಾದ ಆದೇಶದಲ್ಲಿ, ದಕ್ಷಿಣ ಕನ್ನಡ ಜಿಲ್ಲೆಗೆ 100, ಉಡುಪಿ ಜಿಲ್ಲೆಗೆ 198 ಹಾಗೂ ಉತ್ತರ ಕನ್ನಡ ಜಿಲ್ಲೆಗೆ 25 ದೋಣಿಗಳಿಗೆ ಸಾಧ್ಯತಾ ಪತ್ರ ನೀಡಲು ಅನುಮತಿ ನೀಡಲಾಗಿದೆ.

ಮೇಲೆ ಕ್ರಮ ಸಂಖ್ಯೆ (6)ರಲ್ಲಿ ಓದಲಾದ ಆದೇಶದಲ್ಲಿ, ಸಾಧ್ಯತಾ ಪತ್ರ ಪಡೆಯದೆ ನಿರ್ಮಿಸಿರುವ 163 ದೋಣಿಗಳನ್ನು ಸಕ್ರಮಗೊಳಿಸಿ, ನೋಂದಣಿ ಮಾಡಲು ಅನುಮತಿ ನೀಡಲಾಗಿದೆ.

-2-

ಮೇಲೆ ಕ್ರಮ ಸಂಖ್ಯೆ (7)ರಲ್ಲಿ ಓದಲಾದ ನಿರ್ದೇಶಕರು, ಮೀನುಗಾರಿಕೆ ಇಲಾಖೆ ಇವರ ಪತ್ರದಲ್ಲಿ, ಈಗಾಗಲೇ, 4148 ಮೀನುಗಾರಿಕಾ ದೋಣಿಗಳು ನೋಂದಣಿಯಾಗಿರುತ್ತದೆ. ಆದಾಗ್ಯೂ, ಕರಾವಳಿ ಜಿಲ್ಲೆಗಳಲ್ಲಿ ಒಟ್ಟು 1517 ಹೊಸ ದೋಣಿಗಳ ನಿರ್ಮಾಣಕ್ಕೆ ಸಾಧ್ಯತಾ ಪತ್ರ ಕೋರಿ ಹೆಚ್ಚಿನ ಅರ್ಜಿಗಳು ಸ್ವೀಕೃತವಾಗಿದ್ದು, ಅರ್ಜಿ ಸಲ್ಲಿಸಿರುವ ಹೆಚ್ಚಿನ ಮೀನುಗಾರರು ಸಾಂಪ್ರದಾಯಿಕ ವೃತ್ತಿನಿರತ ಮೀನುಗಾರರಾಗಿರದಲ್ಲದೆ, ಕರ್ನಾಟಕ ಕಡಲ ಮೀನುಗಾರಿಕೆ ಕಾಯ್ದೆ-1986ರಲ್ಲಿ ಸಾಂಪ್ರದಾಯಿಕ ಮೀನುಗಾರರ ಹಿತರಕ್ಷಣೆಗಾಗಿ ಮೀನುಗಾರಿಕೆಯನ್ನು ನಿಯಂತ್ರಣ ಮಾಡುವಂತೆ ತಿಳಿಸಲಾಗಿದೆ. ಹೊಸದೋಣಿ ನಿರ್ಮಾಣವು ಲಭ್ಯವಿರುವ ಮತ್ಸ್ಯಸಂಪನ್ಮೂಲದ ದೃಷ್ಟಿಯಿಂದ ಲಾಭದಾಯಕವಾಗಿರದ ಕಾರಣ, ಇನ್ನು ಮುಂದೆ ದೋಣಿ ನಿರ್ಮಾಣಕ್ಕೆ ನೀಡುವ "ಸಾಧ್ಯತಾ ಪತ್ರ" ದ ಬದಲಾಗಿ "ಅನುಮತಿ ಪತ್ರ" ನೀಡಬಹುದಾಗಿದೆ. ಆದ್ದರಿಂದ, ಒಂದು ವೇಳೆ ಮೇಲೆ ಅರ್ಜಿ ಸಲ್ಲಿಸಿರುವ ಅರ್ಜಿದಾರರಿಗೆ ದೋಣಿ ನಿರ್ಮಾಣ ಮಾಡಲು ಅನುಮತಿ ನೀಡುವುದಾದಲ್ಲಿ ಈ ಕೆಳಗಿನ ಷರತ್ತುಗಳನ್ನು ವಿಧಿಸುವುದು ಸೂಕ್ತವೆಂದು ಅಭಿಪ್ರಾಯಿಸಿರುತ್ತಾರೆ.

1. ಅರ್ಜಿದಾರರು ಮೀನುಗಾರಿಕೆ ವೃತ್ತಿಯಲ್ಲಿ ತೊಡಗಿರತಕ್ಕದ್ದು.
2. ದೋಣಿ ನಿರ್ಮಾಣಕ್ಕೆ ಬಂಡವಾಳ ಮೂಲದ ವಿವರ ಹಾಗೂ ಈ ಬಗ್ಗೆ ಸಂಬಂಧಿಸಿದ ಬ್ಯಾಂಕ್ ಖಾತೆ ವಿವರವನ್ನು ನೀಡತಕ್ಕದ್ದು ಹಾಗೂ ಕಡ್ಡಾಯವಾಗಿ PAN ಹಾಗೂ ಆಧಾರ್ ಕಾರ್ಡ್ ಹೊಂದಿರತಕ್ಕದ್ದು.
3. ಇನ್ನು ಮುಂದೆ ಹೊಸದಾಗಿ ದೋಣಿ ನಿರ್ಮಾಣ ಮಾಡುವವರಿಗೆ ಇಲಾಖೆ ಯಿಂದ ಡೀಸೆಲ್ ಸಹಾಯಧನ ನೀಡುವುದು ಸರ್ಕಾರದ ವಿವೇಚನೆಗೆ ಒಳಪಟ್ಟಿರುತ್ತದೆ.
4. ಮೀನುಗಾರಿಕೆಯನ್ನು 12 ನಾಟಿಕಲ್ ಮೈಲ್‌ನವರೆಗೆ ಮಾತ್ರ ನಡೆಸತಕ್ಕದ್ದು ಹಾಗೂ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಕಾಲ ಕಾಲಕ್ಕೆ ಹೊರಡಿಸುವ ನಿಯಮ ಮತ್ತು ಷರತ್ತುಗಳಿಗೆ ಬದ್ಧರಾಗಿರತಕ್ಕದ್ದು
5. ದೋಣಿ ನಿರ್ಮಾಣವನ್ನು ಅನುಮತಿ ಪತ್ರ ಪಡೆದ 2 ವರ್ಷದೊಳಗೆ ಪೂರ್ಣಗೊಳಿಸಿ ನೋಂದಣಿ ಮಾಡತಕ್ಕದ್ದು.
6. ದೋಣಿ ನೋಂದಣಿ ಮಾಡಿ 5 ವರ್ಷದವರೆಗೆ ಮಾರಾಟ ಮಾಡತಕ್ಕದ್ದಲ್ಲ.

-3-

ಮೀನುಗಾರಿಕೆ ನಿರ್ದೇಶಕರ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ, ಕೆಳಕಂಡಂತೆ ಆದೇಶಿಸಿದೆ.

**ಆದೇಶ ಸಂಖ್ಯೆ: ಪಸಂಮೀ 109 ಮೀಇಯೋ 2016, ಬೆಂಗಳೂರು ದಿನಾಂಕ: 21-11-2016**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ರಾಜ್ಯದ ಕರಾವಳಿ ಜಿಲ್ಲೆಗಳಲ್ಲಿ ಮೀನುಗಾರಿಕೆ ನಡೆಸಲು ಹೊಸ ಮೀನುಗಾರಿಕಾ ದೋಣಿ ನಿರ್ಮಾಣಕ್ಕಾಗಿ ಕೆಳಕಂಡ ಷರತ್ತು ಮತ್ತು ನಿಬಂಧನೆಗಳಿಗೊಳಪಡಿಸಿ ಸಾಧ್ಯತಾ ಪತ್ರವನ್ನು ನೀಡಲು ಆದೇಶಿಸಲಾಗಿದೆ.

(1) ಅರ್ಜಿದಾರರು ಮೀನುಗಾರಿಕೆ ವೃತ್ತಿಯಲ್ಲಿ ತೊಡಗಿರತಕ್ಕದ್ದು.

(2) ಇನ್ನು ಮುಂದೆ ಹೊಸದಾಗಿ ದೋಣಿ ನಿರ್ಮಾಣ ಮಾಡುವವರಿಗೆ ಇಲಾಖೆಯಿಂದ ಡೀಸೆಲ್ ಸಹಾಯಧನ ನೀಡುವುದು ಸರ್ಕಾರದ ವಿವೇಚನೆಗೆ ಒಳಪಟ್ಟಿರುತ್ತದೆ.

(3) ಮೀನುಗಾರಿಕೆಯನ್ನು 12 ನಾಟಿಕಲ್ ಮೈಲ್‌ನವರೆಗೆ ಮಾತ್ರ ನಡೆಸತಕ್ಕದ್ದು ಹಾಗೂ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಕಾಲ ಕಾಲಕ್ಕೆ ಹೊರಡಿಸುವ ನಿಯಮ ಮತ್ತು ಷರತ್ತುಗಳಿಗೆ ಬದ್ಧರಾಗಿರತಕ್ಕದ್ದು.

(4) ದೋಣಿ ನಿರ್ಮಾಣವನ್ನು ಅನುಮತಿ ಪತ್ರ ಪಡೆದ 2 ವರ್ಷದೊಳಗೆ ಪೂರ್ಣಗೊಳಿಸಿ ನೋಂದಣಿ ಮಾಡತಕ್ಕದ್ದು.

(5) ದೋಣಿ ನೋಂದಣಿ ಮಾಡಿ 5 ವರ್ಷದವರೆಗೆ ಮಾರಾಟ ಮಾಡತಕ್ಕದ್ದಲ್ಲ

(6) ಸ್ಥಳೀಯ ಶಾಸಕರಿಂದ ಅರ್ಜಿದಾರರು ಮೀನುಗಾರಿಕೆ ವೃತ್ತಿಯಲ್ಲಿ ತೊಡಗಿರುವ ಬಗ್ಗೆ ದೃಢೀಕರಣ ಪತ್ರವನ್ನು ಪಡೆಯತಕ್ಕದ್ದು.

ಈ ಆದೇಶವನ್ನು ಹೊರಡಿಸುವ ದಿನದವರೆಗೆ ಬಂದ ಎಲ್ಲಾ ಅರ್ಜಿಗಳನ್ನು ಪರಿಗಣಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

21/11/16

(ರಶ್ಮಿ ಶಿವಶಂಕರ ಪೋಳ)
ಸರ್ಕಾರದ ಅಧೀನ ಕಾರ್ಯದರ್ಶಿ
ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ
(ಮೀನುಗಾರಿಕೆ)

21/11

**ಇವರಿಗೆ:**

ಸಂಕಲನಕಾರರು, ಕರ್ನಾಟಕ ರಾಜ್ಯ ಪತ್ರ, ಬೆಂಗಳೂರು – ಮುಂದಿನ ಸಂಚಿಕೆಯಲ್ಲಿ ಈ ಆದೇಶವನ್ನು ಮುದ್ರಿಸಿ ಅದರ 50 ಪ್ರತಿಗಳನ್ನು ಈ ಇಲಾಖೆಗೆ ಒದಗಿಸುವಂತೆ ಕೋರಿದೆ.

**ಪ್ರತಿ:**

1) ಪ್ರಧಾನ ಮಹಾಲೇಖಪಾಲರು (ಜಿ&ಎಸ್‌ಎಸ್‌ಎ)(ಇ&ಆರ್‌ಎಸ್‌ಎ), ಕರ್ನಾಟಕ, ಹೊಸ ಕಟ್ಟಡ, ಆಡಿಟ್ ಭವನ, ಬೆಂಗಳೂರು.

2) ಪ್ರಧಾನ ಮಹಾಲೇಖಪಾಲರು (ಎ&ಇ), ಕರ್ನಾಟಕ, ಪಾರ್ಕ್‌ಹೌಸ್ ರಸ್ತೆ, ಬೆಂಗಳೂರು.
3) ಮೀನುಗಾರಿಕೆ ನಿರ್ದೇಶಕರು, ಬೆಂಗಳೂರು.
4) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ದಕ್ಷಿಣ ಕನ್ನಡ ಜಿಲ್ಲೆ, ಉತ್ತರ ಕನ್ನಡ ಜಿಲ್ಲೆ, ಉಡುಪಿ ಜಿಲ್ಲೆ.
5) ಮೀನುಗಾರಿಕೆ ಜಂಟಿ ನಿರ್ದೇಶಕರು, ಬಂದರುಗಳ ಯೋಜನೆ, ಮಲ್ಪೆ.
6) ಸಂಬಂಧಪಟ್ಟ ಮೀನುಗಾರಿಕೆ ಇಲಾಖೆಯ ಅಧಿಕಾರಿಗಳಿಗೆ — ಮೀನುಗಾರಿಕೆ ನಿರ್ದೇಶಕರ ಮುಖಾಂತರ.
7) ಮಾನ್ಯ ಮೀನುಗಾರಿಕೆ, ಯುವಜನ ಸಬಲೀಕರಣ ಮತ್ತು ಕ್ರೀಡಾ ರಾಜ್ಯ ಸಚಿವರ ಆಪ್ತ ಕಾರ್ಯದರ್ಶಿ, ವಿಕಾಸಸೌಧ, ಬೆಂಗಳೂರು.
8) ಶಾಖಾ ರಕ್ಷಾ ಕಡತ/ ಸಮನ್ವಯ-ಕಂಪೆಂಡಿಯಮ್ /ಹೆಚ್ಚಿನ ಪ್ರತಿಗಳು.

MEF